**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1682(1930) |
| ಸದಸ್ಯರ ಹೆಸರು | : | ಶ್ರೀ ಐವನ್ 'ಡಿ' ಸೋಜಾ (ವಿಧಾನ ಸಭಾ ಕ್ಷೇತ್ರ ) |
| ಉತ್ತರಿಸಬೇಕಾದ ದಿನಾಂಕ | : | 24.03.2026 |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯ ಒಳಚರಂಡಿಯ ಕಲುಷಿತ ನೀರಿನಿಂದ ಇಡಿ ನಗರಪಾಲಿಕೆ ಹಾಳಾಗಿದ್ದು, ಇದರ ಬಗ್ಗೆ ಇಲಾಖೆ ಯಾವ ಕ್ರಮಕೈಗೊಂಡಿದೆ. ಈ ಬಗ್ಗೆ ವರದಿಯನ್ನು ಸಂಗ್ರಹಿಸಿದೆಯೇ; (ವಿವರ ನೀಡುವುದು) | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಳ ಚರಂಡಿಯ ಕುರಿತಂತೆ ಕರ್ನಾಟಕ ನಗರ ಮೂಲ ಸೌಲಭ್ಯ ಹಣಕಾಸು ಅಭಿವೃದ್ಧಿ ನಿಗಮದ ವತಿಯಿಂದ (KUIDFC) ಮತ್ತು ಪೌರಾಡಳಿತ ನಿರ್ದೇಶನಾಲಯದ ವತಿಯಿಂದ ಕೈಗೊಂಡ ಕ್ರಮಗಳ ವರದಿ ಪಡೆಯಲಾಗಿರುತ್ತದೆ. |
| ಆ) | ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯ ಪೈಪ್ ಗಳು, ಸ್ಟೋನ್ ವೈರ್ ಪೈಪ್ ಮತ್ತು ಕಲ್ಲಿನಲ್ಲಿ ಕಟ್ಟಿದ ಚೇಂಬರ್ ಎಲ್ಲಾ ಕರಗಿಹೋಗಿ ನಗರಪಾಲಿಕೆಯ ಒಳಚರಂಡಿಯ ನೀರು ಬಾವಿಗಳಿಗೆ ಹರಿದು, ಬಾವಿಗಳ ನೀರು ಮತ್ತು ಯಾವುದೇ ನೀರು ಕುಡಿಯಲು ಅಸಾಧ್ಯ ಪರಿಸ್ಥಿತಿ ಉಂಟಾಗಿದ್ದು, ಈ ಬಗ್ಗೆ ಇಲಾಖೆ ಕೈಗೊಂಡ ಕ್ರಮಗಳೇನು? | **ಏಷ್ಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಕರ್ನಾಟಕ ನಗರ ನೀರು ನಿರ್ವಹಣಾ ಹೂಡಿಕೆ ಕಾರ್ಯಕ್ರಮ (ಕ್ವಿಮಿಪ್) ಯೋಜನೆಯಡಿ**<br><br>ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಒಳಚಂಡಿ ವ್ಯವಸ್ಥೆಯನ್ನು ಅಭಿವೃಧಿ ಪಡಿಸಲು ಅವಶ್ಯಕತೆಗನುಗುಣವಾಗಿ ಹಾಗೂ ಲಭ್ಯವಿದ್ದ ಅನುದಾನದಲ್ಲಿ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣೆ ಹೂಡಿಕೆ ಕಾರ್ಯಕ್ರಮ (KWIMIP) ದಡಿ ಏಷ್ಯನ್ ಅಭಿವೃದ್ಧಿ ಬ್ಯಾಂಕ್, ಕೇಂದ್ರ ಪುರಸ್ಕೃತ ಅಮೃತ್ -1.0, ರಾಜ್ಯ ಸರ್ಕಾರ ಹಾಗೂ ಸ್ಥಳೀಯ ಸಂಸ್ಥೆಗಳ ಸಹಯೋಗದೊಂದಿಗೆ ಕೆ.ಯು.ಐ.ಡಿ.ಎಫ್.ಸಿ ವತಿಯಿಂದ (KWIMIP) ಯೋಜನೆಯಡಿ ರೂ. 316.49 ಕೋಟಿ ಮೊತ್ತದಲ್ಲಿ 8 ಒಳಚರಂಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>ಇದರಲ್ಲಿ 7 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದ್ದು, ಬಾಕಿ 1 ಕಾಮಗಾರಿಯನ್ನು ಜೂನ್-2026 ರೊಳಗೆ ಪೂರ್ಣಗೊಳಿಸಲಾಗುವುದು. ಇಲ್ಲಿಯವರೆಗೆ ರೂ.300.06 ಕೋಟಿಗಳನ್ನು ವೆಚ್ಚಮಾಡಲಾಗಿದೆ.<br><br>ಕಾಮಗಾರಿಯ ವಿವರಗಳನ್ನು ಅನುಬಂಧ -1 ರಲ್ಲಿ ನೀಡಲಾಗಿದೆ.<br><br>**ಜಲಶುದ್ಧಿ ಅಭಿಯಾನ (ಬಳಸಿದ ನೀರು ನಿರ್ವಹಣೆ)**<br><br>ಕೆಯುಐಡಿಎಫ್‌ಸಿ ವತಿಯಿಂದ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಪರಿಸರ ಪರಿಹಾರ ನಿಧಿ ಹಾಗೂ ಸ್ವಚ್ಛ ಭಾರತ್ ಮಿಷನ್ (ನ)-2.0 ಅಡಿ ಬಳಸಿದ ನೀರು ನಿರ್ವಹಣೆ (ಜಲಶುದ್ಧಿ ಮಿಷನ್) ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರದ ಆದೇಶ ಸಂಖ್ಯೆ:ನಅಇ 5 ಸಿಎಸ್‌ಎಸ್ 2023 ದಿನಾಂಕ: 19.07.2023 ರಂದು ಸರ್ಕಾರದಿಂದ ಅನುಮೋದನೆ ನೀಡಲಾಗಿರುತ್ತದೆ.<br><br>ಮಂಗಳೂರು ನಗರಕ್ಕೆ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಪರಿಸರ ಪರಿಹಾರ ನಿಧಿಯಡಿ (ಎನ್.ಜಿ.ಟಿ) ಒಳಚರಂಡಿ ವ್ಯವಸ್ಥೆ ಕಲ್ಪಿಸಲು ರೂ.40.00 ಕೋಟಿಗಳ ಅನುದಾನವನ್ನು ಒದಗಿಸಲಾಗಿದೆ. |

| | | |
|---|---|---|
| | | ಸದರಿ ಅನುದಾನದಲ್ಲಿ 8.20 ಕಿ.ಮೀ ಹಾನಿಗೊಳಗಾಗಿರುವ ಪೈಪ್ ಲೈನ್ ದುರಸ್ತಿ ಕಾಮಗಾರಿ, ಎನ್.ಜಿ.ಟಿ ಮಾನದಂಡಗಳನ್ನು ಅನುಸರಿಸಲು ಪಚನಾಡಿಯಲ್ಲಿ ಪ್ರಸ್ತುತ ಇರುವ 8.75 ಎಂ.ಎಲ್.ಡಿ **ASP Technology** ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನು **SBR Technology** ಗೆ ಉನ್ನತೀಕರಿಸುವ ಕಾಮಗಾರಿ ಮತ್ತು ಬಜಾಲ್ ನಲ್ಲಿ ಪ್ರಸ್ತುತ ಇರುವ 20 ಎಂ.ಎಲ್.ಡಿ **ASP Technology** ತ್ಯಾಜ್ಯ ನೀರು ನೀರು ಸಂಸ್ಕರಣಾ ಘಟಕವನ್ನು ಉನ್ನತೀಕರಿಸುವ ಕಾಮಗಾರಿ ಹಾಗೂ ಅತ್ತಾವರ ನಗರದ ಮನೆಗಳಿಂದ ಹೊರ ಬರುವ ತ್ಯಾಜ್ಯ ನೀರು ತೆರದ ಮಳೆ ನೀರಿನ ಗುಂಡಿಗೆ ಹರಿದು ನದಿ ನೀರನ್ನು ಸೇರಿ ನದಿ ನೀರು ಮಲಿನವಾಗುತ್ತಿರುವುದರಿಂದ ಸದರಿ ತ್ಯಾಜ್ಯ ನೀರನ್ನು, ಅತ್ತಾವರದಲ್ಲಿ ಹೊಸ ವೆಟ್ ವೆಲ್ ನಿರ್ಮಾಣ ಮಾಡಿ ಸದರಿ ವೆಟ್ ವೆಲ್‌ಗೆ ಸಾಗಿಸಿ ನಂತರ ಕಾವೂರ್ ತ್ಯಾಜ್ಯ ನೀರು ಸಂಸ್ಕರಣಾ ಘಟಕಕ್ಕೆ ಸಾಗಿಸುವ ಕಾಮಗಾರಿಗಳನ್ನು ಅಳವಡಿಸಿಕೊಳ್ಳಲಾಗಿದೆ. ಈ ಕುರಿತಂತೆ ಕಾಮಗಾರಿಯು ಪ್ರಾರಂಭವಾಗಿದ್ದು, ಇದುವರೆಗೆ **ರೂ.1.90 ಕೋಟಿಗಳು** ವೆಚ್ಚವಾಗಿರುತ್ತದೆ. |
| ಇ) | ಸ್ಮಾರ್ಟ್ ಸಿಟಿಯ ಹಣವನ್ನು ನಗರದ ಕುಡಿಯುವ ನೀರು ಮತ್ತು ಮೀನುಗಾರಿಕೆಯ ಬಂದರುಗಳ ಅಭಿವೃದ್ಧಿ ಮಾಡದೇ ಮೂಲಭೂತ ಸಮಸ್ಯೆಗಳು ಹಾಗೇ ಉಳಿದಿದ್ದು, ಇದನ್ನು ಸರಿಪಡಿಸಲು ಇಲಾಖೆಯ ಯೋಜನೆಗಳಾವುವು? | **ಸ್ಮಾರ್ಟ್ ಸಿಟಿಯ ಅಭಿಯಾನ**<br><br>ಸ್ಮಾರ್ಟ್ ಸಿಟಿ ಅಭಿಯಾನದ ಮಾರ್ಗಸೂಚಿಗಳ ಅನುಸಾರ ಗುರುತಿಸಲಾದ ಪ್ರಮುಖ ಮೂಲಭೂತ ಸೌಕರ್ಯಗಳು (Core Infrastructure Elements) ಕೆಳಗಿನಂತಿವೆ:<br><br>• ಸ್ಮಾರ್ಟ್ ರಸ್ತೆಗಳ ಅಭಿವೃದ್ಧಿ<br>• ಉದ್ಯಾನವನಗಳ ಅಭಿವೃದ್ಧಿ<br>• ಕೆರೆ ಹಾಗೂ ನದಿ ಪ್ರದೇಶಗಳ ಅಭಿವೃದ್ಧಿ<br>• ಒಳಚರಂಡಿ ಕಾಮಗಾರಿಗಳು<br>• ಮಾರುಕಟ್ಟೆಗಳ ಪುನರ್ ನವೀಕರಣ<br>• Integrated Command & Control Center ಮತ್ತು ICT ಆಧಾರಿತ ಸೇವೆಗಳು<br>• ಕ್ರೀಡಾಂಗಣ/ಈಜುಕೊಳಗಳ ಅಭಿವೃದ್ಧಿ<br>• ಪಾರ್ಕಿಂಗ್ ಪ್ರದೇಶಗಳ ಅಭಿವೃದ್ಧಿ<br>• ಘನ ತ್ಯಾಜ್ಯ ನಿರ್ವಹಣೆ<br><br>ಅದರಂತೆ, ಮಂಗಳೂರು ಸ್ಮಾರ್ಟ್ ಸಿಟಿ ಪ್ರಸ್ತಾವನೆಯಲ್ಲಿ ನಗರದ ಮೂಲಸೌಕರ್ಯ ಸೌಲಭ್ಯಗಳ ಅಭಿವೃದ್ಧಿಗೆ ಹಾಗೂ ನಾಗರೀಕರ ಜೀವನ ಮಟ್ಟ ಸುಧಾರಣೆಗೆ ಪೂರಕವಾದ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.<br><br>ಸ್ಮಾರ್ಟ್ ಸಿಟಿ ಅಭಿಯಾನದ ಮಾರ್ಗಸೂಚಿಗಳ ಅನುಸಾರವೇ ಕಾಮಗಾರಿಗಳನ್ನು ಮಂಗಳೂರು ಸ್ಮಾರ್ಟ್ ಸಿಟಿ ವತಿಯಿಂದ ಕೈಗೊಳ್ಳಲಾಗಿದ್ದು ಕೇವಲ ರಸ್ತೆ ಮತ್ತು ಚರಂಡಿಗಳಿಗೆ ಹಣ ವಿನಿಯೋಗಿಸಿರುವುದಿಲ್ಲ.<br><br>ರಸ್ತೆ ಮತ್ತು ಚರಂಡಿ ಕಾಮಗಾರಿಗಳನ್ನು ಹೊರತುಪಡಿಸಿ Wenlock ಸರ್ಕಾರಿ ಆಸ್ಪತ್ರೆಯ ಅಭಿವೃದ್ಧಿ, ಮಂಗಳಾ ಸ್ಟೇಡಿಯಂ ಹಾಗೂ ಒಲಿಂಪಿಕ್-FINA ಮಾನದಂಡದಂತೆ ಅಂತಾರಾಷ್ಟ್ರೀಯ ಮಟ್ಟದ ಈಜುಕೊಳದ ನಿರ್ಮಾಣ, 13 ಸರ್ಕಾರಿ ಶಾಲೆಗಳಲ್ಲಿ ಇ-ಸ್ಮಾರ್ಟ್ ಸ್ಕೂಲ್ ಸೌಲಭ್ಯ, ಗುಜ್ಜರಕೆರೆ ಹಾಗೂ ಕಾವೂರು ಕೆರೆ ಅಭಿವೃದ್ಧಿ, ಮಂಗಳಾದೇವಿ ದೇವಸ್ಥಾನದ ರಸ್ತೆ ಹಾಗೂ ವೆಂಕಟರಮಣ ದೇವಸ್ಥಾನದ ರಥಬೀದಿ ರಸ್ತೆ ಅಭಿವೃದ್ಧಿ, ಮಂಗಳಾದೇವಿ ಬಸ್ ಟರ್ಮಿನಲ್ ನಿರ್ಮಾಣ ಹೀಗೆ ಹಲವಾರು ಜನೋಪಯೋಗಿ ಪ್ರಮುಖ ಕಾಮಗಾರಿಗಳನ್ನೂ ಸಹ ಕೈಗೊಳ್ಳಲಾಗಿದೆ. |

| | | |
|---|---|---|
| ಈ) | ನಗರಪಾಲಿಕೆ ನೀರು ನೇತ್ರಾವತಿ ನದಿಯಿಂದ ಸರಬರಾಜು ಮಾಡಲಾಗುತ್ತಿದ್ದು, ಈ ನದಿಗೆ ಪ್ಲಾಸ್ಟಿಕ್ ವಸ್ತುಗಳು ಎಸೆದಿರುವುದರಿಂದ ನದಿಯ ನೀರು ಕಲುಷಿತಗೊಂಡಿದೆ ಎಂಬ ವರದಿಗಳು ಬಂದಿದ್ದು, ಈ ಬಗ್ಗೆ ಇಲಾಖೆ ಕೈಗೊಂಡಿರುವ ಕ್ರಮಗಳೇನು? (ವಿವರ ಒದಗಿಸುವುದು) | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಕುಡಿಯುವ ನೀರನ್ನು ನೇತ್ರಾವತಿ ನದಿಗೆ ಅಡ್ಡಲಾಗಿ ತುಂಬೆ ಎಂಬಲ್ಲಿ ನಿರ್ಮಿಸಲಾದ ಕಿಂಡಿ ಅಣೆಕಟ್ಟಿನ ಮೂಲಕ ನೀರನ್ನು ಒದಗಿಸಲಾಗುತ್ತಿದೆ. ಸದರಿ ಕಿಂಡಿ ಅಣೆಕಟ್ಟು ತುಂಬೆ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿದ್ದು, ಮಹಾನಗರ ಪಾಲಿಕೆ ವ್ಯಾಪ್ತಿಯ ಹೊರಭಾಗದಲ್ಲಿದ್ದು, ನದಿ ನೀರು ಕಲುಷಿತಗೊಳ್ಳುತ್ತಿರುವ ಬಗ್ಗೆ ಕ್ರಮ ಕೈಗೊಳ್ಳುವಂತೆ ಆಯುಕ್ತರು, ಮಂಗಳೂರು ಮಹಾನಗರ ಪಾಲಿಕೆ ಇವರು ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್‌ಮಂಗಳೂರು ಇವರಿಗೆ ದಿನಾಂಕ: 20.02.2024, 03.04.2025 ಮತ್ತು 07.03.2026ಗಳಂದು ಪತ್ರಗಳನ್ನು ಬರೆಯಲಾಗಿರುತ್ತದೆ. |
| ಉ) | ಮಾನ್ಯ ಸಚಿವರು ಮಂಗಳೂರು ನಗರಕ್ಕೆ ಬೇಟಿ ನೀಡಿದಾಗ ಕೆರೆಯ ನೀರುಗಳು ಘನತ್ಯಾಜ್ಯ ಒಳಚರಂಡಿ ನೀರು, ಅಭಿವೃದ್ಧಿ ಆಗದ ಎಲ್ಲಾ ಕೆರೆಗಳ ನೀರು ಒಳಚರಂಡಿ ವಾಸನೆ ಬರುತ್ತಿರುತ್ತಿರುವುದು ಗಮನಿಸಿ ಈ ಬಗ್ಗೆ ಕೂಡಲೇ ವರದಿಗಳನ್ನು ಸಂಗ್ರಹಿಸಲು ಅಧಿಕಾರಿಗಳಿಗೆ ನಿರ್ದೇಶಿಸಿದ್ದರೂ ಇದುವರೆಗೂ ಕ್ರಮಕೈಗೊಳ್ಳುವುದೇ ಈ ಬಗ್ಗೆ ನಿರ್ಲಕ್ಷ್ಯ ತೋರಿಸಿದ್ದು, ಈ ಬಗ್ಗೆ ಇಲಾಖೆ ಕೈಗೊಂಡ ಕ್ರಮವೇನು? (ವಿವರ ನೀಡುವುದು) | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಮಹಾಕಾಳಿಪಡ್ಪು ಪ್ರದೇಶದಲ್ಲಿರುವ ಮೊಯಿಲಿ ಕೆರೆಯನ್ನು ಪರಿಶೀಲಿಸಿದ್ದು, ಈ ಪ್ರದೇಶದಲ್ಲಿ ಮಹಾನಗರಪಾಲಿಕೆಯ ಒಳಚರಂಡಿ ವ್ಯವಸ್ಥೆಯು ಇಲ್ಲದಿರುವ ಕಾರಣ ಸುತ್ತಲಿನ ಮನೆಗಳು ಲೀಚ್ ಪಿಟ್ ವ್ಯವಸ್ಥೆಯನ್ನು ಹೊಂದಿದ್ದು ಕೆಲವು ಮನೆಗಳು ಹಾಗೂ ಅಪಾರ್ಟ್‌ಮೆಂಟ್‌ಗಳು ಕೊಳಚೆ ನೀರನ್ನು ಮಳೆ ನೀರು ಚರಂಡಿಗೆ ಬಿಡುತ್ತಿರುವುದು ಕಂಡು ಬಂದಿದ್ದು, ಈ ಕುರಿತಂತೆ ದಿನಾಂಕ 20.2.2026 ಮತ್ತು 14.03.2026 ಗಳಂದು ಸಂಬಂಧಪಟ್ಟವರಿಗೆ ನೋಟೀಸ್ ನೀಡಲಾಗಿರುತ್ತದೆ.ತಪ್ಪಿದ್ದಲ್ಲಿ ಅಂತಹವರ ವಿರುದ್ಧ ಕರ್ನಾಟಕ ಪೌರ ನಿಗಮಗಳ ಅಧಿನಿಯಮ 1976 ಕಲಂ 225, 263 (5) ಗಳನ್ವಯ ಕಾನೂನು ರೀತಿಯ ಮುಂದಿನ ಕ್ರಮ ವಹಿಸಲಾಗುವುದು.<br><br>ಮುಂದುವರೆದು, ಸದರಿ ಪ್ರದೇಶದಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲು ವೆಟ್ ವೆಲ್ ನಿರ್ಮಿಸಲು ಅಗತ್ಯ ಇರುವ ಸ್ಥಳವನ್ನು ಗುರುತಿಸುವ ಕಾರ್ಯ ಪರಿಶೀಲನೆಯಲ್ಲಿರುತ್ತದೆ |

**ಸಂಖ್ಯೆ: ನಅಇ 28 ಎಂಎಂಸಿ 2026 (ಇ)**

(ಬಿ.ಎಸ್.ಸುರೇಶ್)
**ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು**

**ಅನುಬಂಧ--1 ಮಂಗಳೂರು ನಗರದಲ್ಲಿ ಕ್ವಿಮಿಪ್ ಯೋಜನೆಯಡಿ ಅನುಷ್ಠಾನಗೊಳಿಸಲಾಗುತ್ತಿರುವ ಒಳಚರಂಡಿ ಕಾಮಗಾರಿಗಳ ವಿವರಗಳು**

8 ಕಾಮಗಾರಿಗಳನ್ನು ರೂ. 316.49 ಕೋಟಿಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ರೂ. 300.06 ಕೋಟಿಗಳನ್ನು ವೆಚ್ಚಮಾಡಲಾಗಿದೆ.

| ಕ್ರ. ಸಂ | ಕಾಮಗಾರಿಯ ಹೆಸರು | ಗುತ್ತಿಗೆ ಮೊತ್ತ (ರೂ ಕೋಟಿ) | ಕಾಮಗಾರಿ ವಿವರಗಳು | ಭೌತಿಕ ಪ್ರಗತಿ | ಆರ್ಥಿಕ ಪ್ರಗತಿ (ರೂ ಕೋಟಿ) | ಷರಾ |
|---|---|---|---|---|---|---|
| ಅ) ಒಳಚರಂಡಿ ಕಾಮಗಾರಿಗಳು | | | | | | |
| 1 | ಹಾಲಿ ಒಳಚರಂಡಿ ಪಂಪಿಂಗ್ ಮೈನ್ ಪೈಪಲೈನ್ ಬದಲಿ ಕಾಮಗಾರಿ | 84.56 | ಪೈಪ್ ಲೈನ್-11 ಕಿ.ಮೀ | 100 | 84.50 | ಕಾಮಗಾರಿಯು ಪೂರ್ಣಗೊಂಡಿದೆ |
| 2 | ಒಳಚರಂಡಿ ವ್ಯವಸ್ಥೆಯ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಮಗಾರಿ (ವಲಯ 3&5) | 22.40 | ಪೈಪ್ ಲೈನ್-13.92 ಕಿ.ಮೀ,<br>ಮೆಷಿನ್ ಹೋಲ್-512 ಸಂಖ್ಯೆ<br>ಇನ್ಸ್ಪೆಕ್ಷನ್ ಚೆಂಬರ್-34 ಸಂಖ್ಯೆ | 100 | 22.40 | ಕಾಮಗಾರಿಯು ಪೂರ್ಣಗೊಂಡಿದೆ |
| 3 | ಮಂಗಳೂರು ನಗರದ ವಲಯ 9,12&13 ಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಒದಗಿಸುವುದು. | 23.56 | ಪೈಪ್ ಲೈನ್-17.72 ಕಿ.ಮೀ,<br>ಮೆಷಿನ್ ಹೋಲ್ -659 ಸಂಖ್ಯೆ<br>ಇನ್ಸ್ಪೆಕ್ಷನ್ ಚೆಂಬರ್-296 ಸಂಖ್ಯೆ | 100 | 23.56 | ಕಾಮಗಾರಿಯು ಪೂರ್ಣಗೊಂಡಿದೆ |
| 4 | ಸುರತ್ಕಲ್ ಒಳಚರಂಡಿ ವ್ಯವಸ್ಥೆಯ ಪುನಃಶ್ಚೇತನ ಮತ್ತು ಮಿಸ್ಸಿಂಗ್ ಲಿಂಕ್‌ಗಳಿಗೆ ಒಳಚರಂಡಿ ವ್ಯವಸ್ಥೆಯನ್ನು ಒದಗಿಸುವುದು. | 77.59 | ಪೈಪ್ ಲೈನ್-27.40 ಕಿ.ಮೀ,<br>ಮೆಷಿನ್ ಹೋಲ್ -1569 ಸಂಖ್ಯೆ<br>ರಿಟೇನಿಂಗ್ ವಾಲ್-2.93 ಕಿ.ಮೀ | 100 | 77.59 | ಕಾಮಗಾರಿಯು ಪೂರ್ಣಗೊಂಡಿದೆ |
| 5 | ಮಂಗಳೂರು ನಗರದ ವಲಯ 3 & 5 ರ uncovered area ದಲ್ಲಿ ಒಳಚರಂಡಿ ಕಾಮಗಾರಿ | 19.05 | ಪೈಪ್ ಲೈನ್-12.02 ಕಿ.ಮೀ,<br>ಮೆಷಿನ್ ಹೋಲ್ -505 ಸಂಖ್ಯೆ,<br>ಇನ್ಸ್ಪೆಕ್ಷನ್ ಚೆಂಬರ್-19 ಸಂಖ್ಯೆ | 100 | 18.24 | ಕಾಮಗಾರಿಯು ಪೂರ್ಣಗೊಂಡಿದೆ |
| 6 | ಒಳಚರಂಡಿ ವ್ಯವಸ್ಥೆಯ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಮಗಾರಿ (ವಲಯ 1,4 &7) | 30.59 | ಪೈಪ್ ಲೈನ್-8.68 ಕಿ.ಮೀ,<br>ಮೆಷಿನ್ ಹೋಲ್ -350 ಸಂಖ್ಯೆ,<br>ಇನ್ಸ್ಪೆಕ್ಷನ್ ಚೆಂಬರ್-5 ಸಂಖ್ಯೆ<br>ವೆಟ್ ವೆಲ್-1 ಸಂಖ್ಯೆ | 80.20 | 23.35 | ಕಾಮಗಾರಿಯು ಪ್ರಗತಿಯಲ್ಲಿರುತ್ತದೆ |
| 7 | ಹಾಲಿ ಒಳಚರಂಡಿ ವ್ಯವಸ್ಥೆಯ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಮಗಾರಿ (ವಲಯ7) | 22.65 | ಪೈಪ್ ಲೈನ್-10.41ಕಿ.ಮೀ,<br>ಮೆಷಿನ್ ಹೋಲ್ -450 ಸಂಖ್ಯೆ, | 93 | 20.26 | ಕಾಮಗಾರಿಯು ಪ್ರಗತಿಯಲ್ಲಿರುತ್ತದೆ |

| ಕ್ರ.ಸಂ | ಕಾಮಗಾರಿಯ ಹೆಸರು | ಗುತ್ತಿಗೆ ಮೊತ್ತ (ರೂ ಕೋಟಿ) | ಕಾಮಗಾರಿ ವಿವರಗಳು | ಭೌತಿಕ ಪ್ರಗತಿ | ಆರ್ಥಿಕ ಪ್ರಗತಿ (ರೂ ಕೋಟಿ) | ಷರಾ |
|---|---|---|---|---|---|---|
| ಅ) ಒಳಚರಂಡಿ ಕಾಮಗಾರಿಗಳು | | | | | | |
| | | | ಇನ್ಸ್ಪೆಕ್ಷನ್ ಚೆಂಬರ್-7 ಸಂಖ್ಯೆ | | | |
| ೮ | ಮಂಗಳೂರು ನಗರದ ವಲಯ 5 ರ MSEZ R & R colony ದಲ್ಲಿ ಒಳಚರಂಡಿ ಕಾಮಗಾರಿ | 15.63 | ಪೈಪ್ ಲೈನ್-4.30 ಕಿ.ಮೀ,<br>ಮೆಷಿನ್ ಹೋಲ್ - 15 ಸಂಖ್ಯೆ,<br>ವೆಟ್ ವೆಲ್-3 ಸಂಖ್ಯೆ<br>1.5 MLD ತ್ಯಾಜ್ಯ ನೀರು ಸಂಸ್ಕರಣಾ ಘಟಕ | 100 | 9.68 | ಕಾಮಗಾರಿಯು ಪೂರ್ಣಗೊಂಡಿದೆ (ಪ್ರಾಯೋಗಿಕ ಕಾರ್ಯಾಚರಣೆ ಹಂತದಲ್ಲಿದೆ). |
| ಒಟ್ಟು (Incl. expenditure of Terminated works (14.88 Cr + 5.60 Cr)) | | 316.49 | | | 300.06 | |